ದಿನಾಂಕ: 6/5/2020

ಸ್ಥಳ: ಸಿಂಗನಮನೆ ಗ್ರಾ.ಪಂ
ಭದ್ರಾವತಿ.

ಗೆ,

ಶ್ರೀ. ಕೆ ಎಸ್ ಈಶ್ವರಪ್ಪ ,

ಮಾನ್ಯ ಸಚಿವರು ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ,

ಕರ್ನಾಟಕ ಸರ್ಕಾರ , ವಿಧಾನ ಸೌಧ , ಬೆಂಗಳೂರು .

**ವಿಷಯ: ಗ್ರಾಮ ಪಂಚಾಯತ್‌ಗಳಿಗೆ ಆಡಳಿತಾಧಿಕಾರಿಗಳು ಅಥವಾ ಆಡಳಿತ ಸಮಿತಿಯ ನೇಮಕದ ಬದಲಿಗೆ ಹಾಲಿ ಇರುವ ಚುನಾಯಿತ ಪ್ರತಿನಿಧಿಗಳನ್ನೇ ಚುನಾವಣೆ ನಡೆಯುವವರೆಗೆ ಮುಂದುವರೆಸುವ ಬಗ್ಗೆ ಒತ್ತಾಯಿಸಿ ಪತ್ರ**

ಇಡೀ ದೇಶಾದ್ಯಂತ ವ್ಯಾಪಕವಾಗಿ ಹರಡುತ್ತಿರುವ ಕೋವಿಡ್ – 19ರ ಪರಿಣಾಮ ಕರ್ನಾಟಕದ ಮೇಲೂ ಆಗಿರುವುದರಿಂದ ರಾಜ್ಯದಲ್ಲಿನ ಆಡಳಿತ ವ್ಯವಸ್ಥೆಯಲ್ಲಿ ವಿವಿಧ ರೀತಿಯ ಬದಲಾವಣೆಗಳಾಗಿವೆ. ಇದರ ಪರಿಣಾಮ, ಕರ್ನಾಟಕದಲ್ಲಿ, ಇದೇ ಮೇ ತಿಂಗಳ ಅಂತ್ಯದೊಳಗೆ ನಡೆಯಬೇಕಿದ್ದ ಗ್ರಾಮ ಪಂಚಾಯತ್ ಚುನಾವಣೆಯ ಮೇಲೂ ಉಂಟಾಗಿದೆ. ಈ ಕೋವಿಡ್–19ರ ಸಂಕಷ್ಟದ ಸಮಯದಲ್ಲಿ ಚುನಾವಣೆಯಂತಹ ಕಾರ್ಯವನ್ನು ಕೈಗೆತ್ತಿಕೊಳ್ಳುವುದು ಅಸಾಧ್ಯವೇ ಸರಿ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈಗಾಗಲೇ ಹೇಳಿರುವಂತೆ ಸುಮಾರು 6 ತಿಂಗಳುಗಳ ಕಾಲ ಚುನಾವಣೆ ಮುಂದೂಡಬೇಕಾಗಿರುವುದು ಅನಿವಾರ್ಯವಾಗಿದೆ. ಆದರೆ ಆಡಳಿತಾಧಿಕಾರಿಯ ನೇಮಕ ಅಥವಾ ಬೇರ್ಯಾವುದೋ ಉಸ್ತುವಾರಿ ಸಮಿತಿ ನೇಮಕ ಮಾಡುವ ಸರ್ಕಾರದ ಆಲೋಚನೆ ಕಾನೂನಿನಲ್ಲಿ ಅವಕಾಶವಿದ್ದರೂ ಈ ವಿಕೋಪದ ಪರಿಸ್ಥಿತಿ ಇರುವಾಗ ಸೂಕ್ತವಾದುದಲ್ಲ.

ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸರ್ಕಾರದ ರಥದ ಎರಡು ಗಾಲಿಗಳಿದ್ದಂತೆ. ಸರ್ಕಾರದ ರಥ ಮುನ್ನಡೆಸುವಲ್ಲಿ ಇಬ್ಬರ ಪಾತ್ರವೂ ಬಹಳ ಪ್ರಮುಖವಾದುದು, ಗ್ರಾಮ ಪಂಚಾಯತ್ ಒಂದು ಸ್ಥಳೀಯ ಸ್ವಯಂ ಸರ್ಕಾರ. ಹೀಗಾಗಿಯೇ ಇಡೀ ರಾಜ್ಯದಾದ್ಯಂತ ಕೋವಿಡ್–19ರ ಪರಿಸ್ಥಿತಿ ಘೋಷಣೆಯ ಆದಾಗ ಮೊಟ್ಟಮೊದಲು ಸರ್ಕಾರ ಮಾಡಿದ ಕೆಲಸವೆಂದರೆ ಪಂಚಾಯತ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಇಲಾಖೆಗಳ, ಸ್ವಯಂಸೇವಾ ಸಂಸ್ಥೆಗಳ, ಸ್ವಯಂಸೇವಕರ ಸಂಯೋಜನೆಯಲ್ಲಿ ಕಾರ್ಯಪಡೆ (ಕಾರ್ಯಪಡೆ) ರೂಪಿಸಿ ಇಡೀ ಪಂಚಾಯತ್‌ನ ವಿಕೋಪ ನಿರ್ವಹಣೆಯ ಜವಾಬ್ದಾರಿಯ ನೇತೃತ್ವವನ್ನು ಗ್ರಾಮ ಸರ್ಕಾರಕ್ಕೆ ನೀಡಿದ್ದು, ಚುನಾಯಿತ ಪ್ರತಿನಿಧಿಗಳಾದ ನಾವು ಪಂಚಾಯತ್ ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸಿ ಅನುಭವ ಪಡೆದು ಗ್ರಾಮ ಪಂಚಾಯತ್ ಅಭಿವೃದ್ಧಿಯಲ್ಲಿ ನಮ್ಮ ಪಾತ್ರ-ಜವಾಬ್ದಾರಿಗಳ ಮಹತ್ವವನ್ನು ಆಳವಾಗಿ ಅರ್ಥೈಸಿಕೊಂಡಿದ್ದರಿಂದ ವಿಕೋಪದ ಪರಿಸ್ಥಿತಿಯನ್ನೂ ಸಹ ನಿಭಾಯಿಸಲು ಸ್ಥಳೀಯ ಸರ್ಕಾರವಾಗಿ ನಮಗೆ ಸಾಧ್ಯವಾಯಿತು. ಈ ಸಂದರ್ಭದಲ್ಲಿ ಗ್ರಾಮೀಣ ಜನರ ಅಗತ್ಯತೆಗಳೇನು, ಇಲ್ಲಿನ ಪರಿಸ್ಥಿತಿ ಹೇಗಿದೆ, ಆಗಬೇಕಾದ ಪ್ರಮುಖ ಕಾರ್ಯಗಳೇನು, ಮುಂದಿರುವ ಸವಾಲುಗಳೇನು ಎಂಬುದನ್ನು ಕೂಲಂಕುಷವಾಗಿ ಗಮನಿಸಿದ್ದೇವೆ.

ಒಂದು ರೀತಿಯಲ್ಲಿ ತುರ್ತು ಪರಿಸ್ಥಿತಿಯಂತೆ ಇರುವ ಈ ಸಮಯದಲ್ಲಿ ನಾವು ಸ್ಥಳೀಯ ಸರ್ಕಾರದ ಅವಿಭಾಜ್ಯ ಅಂಗವಾಗಿ, ವಿಕೋಪವನ್ನು ಸಮರ್ಥವಾಗಿ ನಿಭಾಯಿಸುವಲ್ಲಿ, ಜನರ ಸಂಕಷ್ಟಗಳಿಗೆ ಸ್ಪಂದಿಸುವಲ್ಲಿ ಉತ್ತರದಾಯಿಯಾಗಿ ಕಾರ್ಯನಿರ್ವಹಿಸುತ್ತೇವೆ. ಚುನಾಯಿತ ವರ್ಗ ಹಾಗೂ ಅಧಿಕಾರಿ ವರ್ಗ ಒಗ್ಗೂಡಿ ಆಡಳಿತ ನಡೆಸಿರುವುದೇ ಈ ಪರಿಸ್ಥಿತಿಯ ಸಮರ್ಪಕ ನಿರ್ವಹಣೆಗೆ ಪ್ರಮುಖ ಕಾರಣ. ಈ ವಿಕೋಪದ ಪರಿಸ್ಥಿತಿ ಇನ್ನೂ ಮುಂದುವರಿಯುತ್ತಿರುವ ಈ ಸವಾಲಿನ ಸಮಯದಲ್ಲಿ, ಪಂಚಾಯತ್ ಆಡಳಿತಕ್ಕೆ ಕೇವಲ ಆಡಳಿತಾಧಿಕಾರಿಯ ಅಥವಾ ಉಸ್ತುವಾರಿ ಸಮಿತಿಯ ನೇಮಕ ಅಸಮಂಜಸವಾದುದು. ತಮ್ಮ ಸರ್ಕಾರದ ಈ ಆಲೋಚನೆ, ನಿರ್ಧಾರವನ್ನು ತಕ್ಷಣವೇ ಕೈಬಿಟ್ಟು, ಪ್ರಸ್ತುತ ಇರುವ ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡಿರುವ ಸ್ಥಳೀಯ ಸರ್ಕಾರವನ್ನೇ ಮಧ್ಯಂತರ ಸ್ಥಳೀಯ ಸ್ವಯಂ ಸರ್ಕಾರವಾಗಿ ಮುಂದುವರಿಸಬೇಕಾಗಿ ಈ ಮೂಲಕ ಕರ್ನಾಟಕ ರಾಜ್ಯ ಸರ್ಕಾರವನ್ನು ಒತ್ತಾಯಿಸಿ ನಮ್ಮ ಪಂಚಾಯತ್‌ನ ಸಾಮಾನ್ಯ ಸಭೆಯ ನಿರ್ಣಯವನ್ನು ಮಂಡಿಸುತ್ತಿದ್ದೇವೆ. ಇದೇ ಪಂಚಾಯತ್‌ನ ಜನರಿಂದ ಜನರಿಂದ ಚುನಾಯಿತರಾದ ನಾವು ಸ್ಥಳೀಯ ಸರ್ಕಾರದ ಭಾಗವಾಗಿ ನಮ್ಮ ಗ್ರಾಮದ ಜನರಿಗೆ, ಗ್ರಾಮದ ಅಭಿವೃದ್ಧಿಗೆ ಬದ್ಧರಾಗಿದ್ದೇವೆ.

ಇತಿ,

ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು
ಸಿಂಗನಮನೆ ಗ್ರಾಮ ಪಂಚಾಯತ್, ಭದ್ರಾವತಿ ತಾಲೂಕು, ಶಿವಮೊಗ್ಗ ಜಿಲ್ಲೆ

**ಯಥಾ ಪ್ರತಿ:**

- ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ
- ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ
- ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ
- ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ, ಕರ್ನಾಟಕ

## ಸಿಂಗನಮನೆ ಗ್ರಾಮ ಪಂಚಾಯಿತಿ , ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

| ಕ್ರ.ಸಂ | ಸದಸ್ಯರುಗಳ ಹೆಸರು | ಪದನಾಮ | ಸಹಿ |
|---|---|---|---|
| 1 | ಶ್ರೀಮತಿ ಉಮಾ.ಆರ್ | ಅಧ್ಯಕ್ಷರು | |
| 2 | ಶ್ರೀ ಪ್ರವೀಣ್ .ಆರ್ | ಉಪಾಧ್ಯಕ್ಷರು | |
| 3 | ಶ್ರೀಮತಿ ಲಕ್ಷ್ಮಮ್ಮ | ಸದಸ್ಯರು | |
| 4 | ಶ್ರೀ ಎನ್.ಕುಮಾರ್ | ಸದಸ್ಯರು | |
| 5 | ಶ್ರೀ ಕೆ. ಟಿ.ಗಿರೀಶ್ | ಸದಸ್ಯರು | Girish.K.T. |
| 6 | ಶ್ರೀಮತಿ ಜಯಮ್ಮ.ಹೆಚ್.ಎಮ್ | ಸದಸ್ಯರು | |
| 7 | ಶ್ರೀಮತಿ ಜಯಮ್ಮ | ಸದಸ್ಯರು | |
| 8 | ಶ್ರೀ ಪುಟ್ಟರಾಜ ಜೆ | ಸದಸ್ಯರು | |
| 9 | ಶ್ರೀ ಸ್ವಾಮಿ | ಸದಸ್ಯರು | |
| 10 | ಶ್ರೀ ಭಕ್ತವತ್ಸಲಂ | ಸದಸ್ಯರು | |
| 11 | ಶ್ರೀ ಎಸ್.ಮಂಜುನಾಥ | ಸದಸ್ಯರು | |
| 12 | ಶ್ರೀಮತಿ ಮಂಜುಳಮ್ಮ | ಸದಸ್ಯರು | |
| 13 | ಶ್ರೀ ಕೆ.ಪಿ.ರುದ್ರೇಶ್ | ಸದಸ್ಯರು | |
| 14 | ಶ್ರೀಮತಿ ವಸಂತ | ಸದಸ್ಯರು | |
| 15 | ಶ್ರೀಮತಿ ಲಕ್ಷ್ಮೀ | ಸದಸ್ಯರು | |
| 16 | ಶ್ರೀಮತಿ ಶಶಿಕಲಾ | ಸದಸ್ಯರು | |
| 17 | ಶ್ರೀ ಟಿ.ಡಿ.ಶಶಿಕುಮಾರ್ | ಸದಸ್ಯರು | |
| 18 | ಶ್ರೀಮತಿ ಸುಜಾತ. ಜೆ | ಸದಸ್ಯರು | J. Sujatha |
| 19 | ಶ್ರೀಮತಿ ಸುಮಲತಾ | ಸದಸ್ಯರು | Sumalatha |
| 20 | ಶ್ರೀ ಮಂಜಪ್ಪ ಹೆಚ್ | ಸದಸ್ಯರು | |
| 21 | ಶ್ರೀಮತಿ ಲಕ್ಷ್ಮಿ | ಸದಸ್ಯರು | |